**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**
**ಸಿ.ಸಿ ನಂಃ 131/ 2016**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಕಿಶನ್ | ಪ್ರಾಸಾಃ 01 |
| ತಂದೆ ಹೆಸರುಃ | ಭೋಜು ರಾಠೋಡ್ | ಚಾಸಾಃ 01 |
| ವಯಸ್ಸುಃ | 55 ವರ್ಷ | ದಿಃ 29-07-2024 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಚಾಮನಳ್ಳಿ ತಾಡಾ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ಚಾಸಾಃ 4 ನನ್ನ ಮಗ ಆಗಿದ್ದ, ಈಗ 06 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಚಾಸಾಃ 5 ಸಹ ನನ್ನ ಮಗ ಆಗಿರುತ್ತಾನೆ. ನನಗೆ ಚಾಸಾಃ6 ಮತ್ತು 7 ರವರು ನನ್ನ ಸೊಸೆಯಂದಿರು ಆಗಿರುತ್ತಾರೆ. ನನಗೆ ಚಾಸಾಃ 8 ರಿಂದ 10 ರವರ ಪರಿಚಯ ಇದೆ. ಆ ಪೈಕಿ ಚಾಸಾಃ 9 ರವರು ಸಹ ಈಗ ತೀರಿಕೊಂಡಿರುತ್ತಾರೆ. ನನಗೆ ನ್ಯಾಯಾಲಯದ ಮುಂದೆ ಇರುವ 2 ರಿಂದ 4 ನೇ ಆರೋಪಿತರ ಪರಿಚಯ ಇದೆ.

ನಾನು ಚಾಮನಳ್ಳಿ ಗ್ರಾಮದ ಸರ್ವೆ ನಂ.150 ರ 03 ಎಕರೆ 19 ಗುಂಟೆ ಜಮೀನು ಮಾಲಿಕ ಹಾಗೂ ಕಬ್ಜಾದಾರನಾಗಿದ್ದು, ಸದರಿ ಜಮೀನಿನ ಕಂದಾಯ ದಾಖಲೆಗಳು ನನ್ನ ಹೆಸರಿನಲ್ಲಿ ಇರುತ್ತವೆ. ನಾನು ಉಪ-ಜೀವನಕ್ಕಾಗಿ ಬಾಂಬೆಗೆ ಹೋಗಿ ಆಗಾಗ ಊರಿಗೆ ಬಂದು ಹೋಗುತ್ತಿದ್ದೆನು. 1 ನೇ ಆರೋಪಿ ನಾನು ಊರಲ್ಲಿ ಇರುವುದಿಲ್ಲ ಎಂದು ತಿಳಿದುಕೊಂಡು ತಾನೇ ಕಿಶನ್ ತಂದೆ ಭೋಜುರಾಠೊಡ್ ಎಂದು ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡು ನನ್ನ ಹೆಸರಿನ ಸುಳ್ಳು ಸಹಿ ಮಾಡಿ ಸದರಿ ಜಮೀನಿಗೆ ಸಂಬಂಧಿಸಿದಂತೆ ಚಾಸಾಃ 10 ರವರಿಗೆ ನೊಂದಾಯಿತಾ ಖರೀದಿ ಕರಾರು ಪತ್ರ ಮಾಡಿಕೊಟ್ಟಿದ್ದರು. ನಾನು ಊರಿಗೆ ಬಂದಾಗ ಸದರಿ ಕರಾರು ಪತ್ರದ ವಿಷಯ ಗೊತ್ತಾಗಿದ್ದು ನನ್ನ ಆದಾರ ಕಾರ್ಡ್ ಹಾಗೂ ಇತರೆ ದಾಖಲೆಗಳೊಂದಿಗೆ ಉಪ-ನೊಂದಣಾಧಿಕಾರಿಗಳ ಕಚೇರಿಗೆ ಹೋಗಿ ಪರಿಶೀಲನೆ ಮಾಡಲಾಗಿ 1 ನೇ ಆರೋಪಿ ನನ್ನ ಹೆಸರಿನಲ್ಲಿ ಇದ್ದ ಸುಳ್ಳು ದಾಖಲೆ ಮಾಡಿಕೊಟ್ಟಿದ್ದು 2 ನೇ ಆರೋಪಿ ಶೀಲಾ ಇವರು ತಾವು ಮುದ್ನಾಳ ತಾಂಡಾದ ದೇವಿಬಾಯಿ ಗಂಡ ಲಕ್ಷ್ಮಣ ಎಂದು ಸುಳ್ಳು ಸಾಕ್ಷಿಯಾಗಿ ಕರಾರು ಪತ್ರಕ್ಕೆ ಸಹಿ ಮಾಡಿರುವುದು ಗೊತ್ತಾಗಿರುತ್ತದೆ. ಅಲ್ಲದೇ 4 ನೇ ಆರೋಪಿ ಪರಶುರಾಮ್ ಸಹ ಕರಾರು ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿ ಸುಳ್ಳು ದಾಖಲೆ

ಸೃಷ್ಟಿ ಮಾಡಿಕೊಳ್ಳಲು ಸಹಾಯ ಮಾಡಿರುವುದು ಗೊತ್ತಾಗಿರುತ್ತದೆ. 3 ನೇ ಆರೋಪಿ ವಿಜಯ ತಂದೆ ಬಲರಾಮ್ ರಾಠೋಡ್ ರವರು ತಾವು ವಿಜಯ ತಂದೆ ಕಿಶನ್ ಮುದ್ನಾಳ ಎಂದು ಸುಳ್ಳು ಹೇಳಿಕೊಂಡು ಕರಾರು ಪತ್ರಕ್ಕೆ ಒಪ್ಪಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ನಾನು ನಂತರ ಯಾದಗಿರಿ ಗ್ರಾಮೀಣಾ ಠಾಣೆಗೆ ಹೋಗಿ ದೂರು ದಾಖಲು ಮಾಡಿರುತ್ತೇನೆ. ಪೋಲಿಸರಿಗೆ ಸೂಕ್ತ ದಾಖಲಾತಿಗಳನ್ನು ಒದಗಿಸಿದ್ದೆನು.

ಸಾಕ್ಷಿ ದೂರಿನಲ್ಲಿ ಇರುವ ತಮ್ಮ ಸಹಿಯನ್ನು ಈಗ ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಹಾಗೂ ಸಾಕ್ಷಿಯ ಸಹಿ ನಿಪಿ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರಃ ಎಂ.ಬಿ.ಪಿ.ಹೆಚ್ ವಕೀಲರವರಿಂದಃ**

ಆರೋಪಿತರು ಖರೀದಿ ಕರಾರು ಪತ್ರ ಮಾಡಿಕೊಟ್ಟ ಒಂದು ವರ್ಷದ ನಂತರ ನನಗೆ ವಿಷಯ ಗೊತ್ತಾಗಿರುತ್ತದೆ. ನನಗೆ ಗ್ರಾಮಸ್ಥರು ಕರೆ ಮಾಡಿ ಆರೋಪಿತರು ಮಾಡಿ ಕೊಟ್ಟಿರುವ ಖೊಟ್ಟಿ ಪತ್ರದ ಬಗ್ಗೆ ತಿಳಿಸಿದಾಗ ಗೊತ್ತಾಗಿತ್ತು. ವಿಷಯ ಗೊತ್ತಾದ ನಂತರ ನಾನು ನೊಂದಣಾಧಿಕಾರಿಯವರ ಕಚೇರಿಗೆ ಹೋಗಿ ಪತ್ರವನ್ನು ತೆಗೆಸಿ ನೋಡಿ, ನಂತರ ದೂರು ದಾಖಲು ಮಾಡಿರುತ್ತೇನೆ. ನಾನು ನೊಂದಣಾಧಿಕಾರಿಯವರ ಕಚೇರಿಗೆ ಹೋಗಿ ಖರೀದಿ ಕರಾರು ಪತ್ರವನ್ನು ನೋಡಿದ್ದೆನು. ನನಗೆ ವಿಷಯ ಗೊತ್ತಾದ ನಂತರ 10-15 ದಿನಗಳಲ್ಲಿ ನೊಂದಣಾಧಿಕಾರಿಯವರ ಕಚೇರಿಗೆ ಹೋಗಿ ದಾಖಲಾತಿ ತೆಗೆಸಿ ನೋಡಿದ್ದೆನು. ದಾಖಲಾತಿಯಲ್ಲಿ ನಿಮಗೆ ಯಾವ ವಿಷಯ ಕಂಡುಬಂದಿದೆ ಎಂದರೆ ಸಾಕ್ಷಿಯು ಖರೀದಿ ಕರಾರು ಮಾಡಿಕೊಟ್ಟಿದ್ದಾರೆ ಎಂಬುದು ಗೊತ್ತಾಗಿತ್ತು ಎಂದು ನುಡಿಯುತ್ತಾರೆ. ಯಾವ ಮೊತ್ತಕ್ಕೆ ಕರಾರು ಪತ್ರ ಮಾಡಿಕೊಂಡಿದ್ದರು ನನಗೆ ಗೊತ್ತಿಲ್ಲ.

ಸರ್ವೆ ನಂ.150 ರ ಜಮೀನನ್ನು ನಾನು ಖರೀದಿ ಮಾಡಿದ್ದೆನು. ನಾನು ಸದರಿ ಜಮೀನು ಖರೀದಿ ಮಾಡುವ ಪೂರ್ವದಲ್ಲಿ ಸರ್ವೆ ನಂ.150 ರಲ್ಲಿ ಒಟ್ಟು 33 ಎಕರೆ ಜಮೀನು ಇತ್ತು. ಆ ಪೈಕಿ ನಾನು 04 ಎಕರೆ ಜಮೀನು ಖರೀದಿ ಮಾಡಿದ್ದೆನು. ನಾನು ಭೀಮಶಪ್ಪ ತಂದೆ ಸಾಯಬಣ್ಣ ಎಂಬುವವರಿಂದ ಖರೀದಿ ಮಾಡಿದ್ದೆನು.

ನನಗೆ ವಿಷಯ ಗೊತ್ತಾದ ನಂತರ ನಾನು ಚಾಸಾಃ 10 ರವರೊಂದಿಗೆ ಆ ಬಗ್ಗೆ ಚರ್ಚೆ ಮಾಡಿಲ್ಲ. ಸೃಷ್ಟಿ ಮಾಡಿಕೊಂಡ ಪತ್ರದಲ್ಲಿ 1 ರಿಂದ 4 ನೇ ಆರೋಪಿತರು ಸಹಿಗಳನ್ನು ಮಾಡಿದ್ದಾರೆ. ಅವರನ್ನು ಹೊರತು ಪಡಿಸಿ ಬೇರೆಯವರೂ ಸಹ ಸದರಿ ಪತ್ರದಲ್ಲಿ ಸಹಿಗಳನ್ನು

ಮಾಡಿದ್ದಾರೆ. ಸದರಿ ಬೇರೆ ವ್ಯಕ್ತಿಗಳ ಹೆಸರು, ವಿಳಾಸ ನನಗೆ ಗೊತ್ತಿಲ್ಲ. ಸರ್ವೆ ನಂ.150 ಜಮೀನಿಗೆ ಸಂಬಂಧಿಸಿದಂತೆ ನನ್ನ ಮತ್ತು ಹೋರುಂಚಾ ಗ್ರಾಮದ ಶರಣಪ್ಪ ಹಾಗೂ ಇತರರ ನಡುವೆ ನ್ಯಾಯಾಲಯದಲ್ಲಿ ದಾವೆ ನಡೆದಿರುತ್ತದೆ ಎಂದರೆ ಸರಿಯಲ್ಲ. 04 ಎಕರೆ ಜಮೀನು ತಮಗೆ ಸೇರಿರುತ್ತದೆ ಎಂದು ಸದರಿ ಶರಣಪ್ಪ ಮತ್ತು ಇತರರು ನನ್ನ ವಿರುದ್ದ ದಾವೆ ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿ ಸಾಕಷ್ಟು ವರ್ಷ ವಿಚಾರಣೆ ನಡೆದು ಸದರಿ 04 ಎಕರೆ ಜಮೀನು ಶರಪಣಪ್ಪ ರವರಿಗೆ ಸೇರಿರುತ್ತದೆ ಎಂದು ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮತ್ತು ಶರಣಪ್ಪ ರವರ ನಡುವೆ ಸದರಿ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಹಲವಾರು ಬಾರಿ ತಕರಾರು ಆಗಿರುತ್ತದೆ ಎಂದರೆ ಸರಿಯಲ್ಲ. 4 ನೇ ಆರೋಪಿ ನ್ಯಾಯ ಪಂಚಾಯತಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ನಡೆಯುತ್ತಿರುವಾಗ 4 ನೇ ಆರೋಪಿ ಜಮೀನು ಶರಣಪ್ಪ ರವರಿಗೆ ಸೇರಿರುವುದರಿಂದ ನನಗೆ ಅದರಲ್ಲಿ ಕೈ ಹಾಕದಂತೆ ತಿಳಿಸಿದ್ದರು ಎಂದರೆ ಸರಿಯಲ್ಲ. ನನಗೆ ಹಸ್ತಕ್ಷೇಪ ಮಾಡದಂತೆ ತಿಳಿಸಿದ್ದರಿಂದ ನಾನು 4 ನೇ ಆರೋಪಿ ಹಾಗೂ ಅವರ ಸಂಬಂಧಿಕರಾದ 1 ರಿಂದ 3 ನೇ ಆರೋಪಿತರ ವಿರುದ್ಧ ಪ್ರಸ್ತುತ ಸುಳ್ಳು ದೂರು ದಾಖಲು ಮಾಡಿದ್ದೆನೆಂದರೆ ಸರಿಯಲ್ಲ.

ನೀವು ಕರಾರು ಪತ್ರ ಮಾಡಿಕೊಂಡ ಒಂದು ವರ್ಷದ ನಂತರ ವಿಷಯ ಗೊತ್ತಾಗಿದೆ ಎಂದು ತಿಳಿಸಿದ್ದು, ದೂರು ದಾಖಲಿಸಲು ಎರಡು ವರ್ಷ ಕಾಲ ವಿಳಂಬ ಮಾಡಿದ್ದೀರಿ ಎಂದರೆ ಸಾಕ್ಷಿಯು 2010 ರಲ್ಲಿಯೇ ನಾನು ದೂರು ನೀಡಿದ್ದೆನು ಎಂದು ನುಡಿಯುತ್ತಾರೆ. ಕರಾರು ಪತ್ರದಲ್ಲಿನ ಜಮೀನಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಕಾರಣ ಇಲ್ಲದಿದ್ದರಿಂದ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ).

**ಮರುವಿಚಾರಣೆ : ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ.**